# ಎನಗೊಬ್ಬ ದೊರೆ ದೊರಕಿದನು

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 40.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 106.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 200.
4. **Note:** Lyrics given here are as per Ref. 1. The wordings in Ref. 2 and Ref. 3 are same as in Ref. 1 except few wordings which are given in yellow highlights.
5. **Note:** Singer has followed the wordings as in Ref. 2.

ರಾಗ: ಧನ್ಯಾಸಿ ತಾಳ: ಅಟ್ಟ

ಎನಗೊಬ್ಬ ದೊರೆ ದೊರಕಿದನು ॥ ಪ ॥
ವನಜಸಂಭವನಯ್ಯ ಹನುಮಂತರ್ಯಾಮಿ ॥ ಅಪ ॥ (ಸಂಭವಜನಕ)

ಮಾತಾಪಿತನಾದ ಭ್ರಾತೃ ಬಾಂಧವನಾದ (ಭ್ರಾತ)
ಪ್ರೀತಿಯಿಂದಲಿ ತಾನೆ ನಾಥನಾದ
ಖ್ಯಾತನು ತಾನಾದ ದಾತನು ತಾನಾದ
ಭೂತೇಶವಂದ್ಯ ವಿಭೂತಿಪ್ರದನಾದ ॥ ೧ ॥ (ವಿಭೂತಿಪ್ರಿಯನಾದ)

ಅಜರಾಮರಣನಾದ ಅಪ್ರಾಕೃತನಾದ (ಅಜರಾಮರನಾದ)
ವಿಜಯಗೊಲಿದು ನಿಜ ಸೂತನಾದ
ಭುಜಗಶಯನನಾದ ತ್ರಿಜಗ ವಂದಿತನಾದ
ಅಜಾಮಿಳನ ಅಂತ್ಯಕೃತ್ಯಂತ ಸುಹೃದನಾದ ॥ ೨ ॥

ಶಂಖ ಚಕ್ರಾಂಕಿತ ಸಂಕರ್ಷಣನಾದ
ಬಿಂಕದಿಂದಲಿ ಬಿರುದು ಪೊತ್ತವನಾದ
ಪಂಕಜನಯನ ಮೀನಾಂಕಜನಕನಾದ
ಓಂಕಾರ ಮೂರುತಿ ಪುರಂದರ ವಿಠಲನಾದ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಉಪಾಸನೆಗಾಗಿ ಶ್ರೀಹರಿ ದೊರೆತದ್ದು ಜ್ಞಾನಿಗಳಾದ ಪುರಂದರ ದಾಸರಿಗೊಂದು ಸಂಭ್ರಮದ ಸಂಗತಿಯಾಗಿದೆ.

**ವನಜಸಂಭವನಯ್ಯ** – ಬ್ರಹ್ಮನ ತಂದೆ.

**ಮಾತಾಪಿತನಾದ** – ಜಗತ್ತಿಗೆ ಮಾತೃ ಸ್ಥಾನದಲ್ಲಿರುವ ಮೂಲ ಪ್ರಕೃತಿಯು (ಲಕ್ಷ್ಮಿಯು) ಅವನ ಸ್ವರೂಪಾಂಶವೇ; ಜಗತ್ತಿಗೆ ಪಿತೃ ಸ್ಥಾನದಲ್ಲಿರುವ ಚತುರ್ಮುಖ ಬ್ರಹ್ಮನು ಅವನ ಸಂಕಲ್ಪಾನುಸಾರ ಇರುವನಾಗಿ ಅವನನ್ನೇ ತನ್ನ ಬಿಂಬವಾಗಿ ಪಡೆದವನು.

**ಭ್ರಾತ ಬಾಂಧವ** – ದೇವತಾ ತಾರತಮ್ಯದಲ್ಲಿ ಹಿರಿಯಣ್ಣ; ಎಲ್ಲ ದೇವತೆಗಳೊಳಗೂ ನಿಯಾಮಕನಾಗಿ ತಾನೇ ಇರುವುದರಿಂದ ಬಾಂಧವ.

**ಪ್ರೀತಿಯಿಂದ** – ಸ್ವಭಾವಭೂತವಾದ ಕಾರುಣ್ಯದಿಂದ.

**ಖ್ಯಾತನು** – ಸರ್ವಾನುಭವಸಾಕ್ಷಿಯಾಗಿ ಆಗಮೈಕವೇದ್ಯನಾಗಿ ಪ್ರಸಿದ್ಧ.

**ದಾತನು** – ಎಲ್ಲ ತತ್ತ್ವೇಶರಿಗೂ ಸ್ವಕಾರ್ಯನಿರ್ವಹಣೆಯ ಸ್ವಾತಂತ್ರ್ಯವನ್ನು ಕೊಡುವವನು.

**ಭೂತೇಶವಂದ್ಯ** – ರುದ್ರನಿಂದ ಸ್ತುತನಾದವನು.

**ವಿಭೂತಿಪ್ರದ** – ದೇವತೆಗಳಿಗೂ ಜೀವರಿಗೂ ಸ್ವರೂಪಯೋಗ್ಯವಾದ ಮಹಿಮೆಯನ್ನು ಕೊಡುವವನು.

**ವಿಜಯ** – ಅರ್ಜುನ

**ವಿಜಯಗೊಲಿದು...** – ಅರ್ಜುನನ ಮೇಲಣ ವಿಶ್ವಾಸದಿಂದ ಅವನ ರಥಕ್ಕೆ ಸಾರಥಿಯಾದ.

**ಅಜಾಮಿಳನಂತ್ಯಕ್ಕೆ ಅತ್ಯಂತ ಸುಹೃದನಾದ** – ಕಾನ್ಯಕುಬ್ಜದ ದುರಾಚಾರರಿ ಬ್ರಹ್ಮಣನು ಕಡೆಗಾಲದಲ್ಲಿ ತನ್ನ ಮಗನನ್ನು ನಾರಾಯಣನೆಂಬ ಹೆಸರಿನಿಂದ ಕರೆಯಲು, ನಾಮಸ್ಮರಣೆಯ ಮಹಿಮೆಯಿಂದ ಸ್ವರ್ಗವನ್ನು ಪಡೆದ ಕತೆ ಹಿನ್ನೆಲೆ.

**ಸಂಕರ್ಷಣ** – ವಿಷ್ಣುವಿನ ಚತುರ್ವ್ಯೂಹಗಳಲ್ಲಿ ಒಂದು.

**ಬಿಂಕದಿಂದಲಿ…** – ಸರ್ವೋತ್ತಮನೆಂಬ ಕೀರ್ತಿಯನ್ನು ಪಡೆದವನು.

**ಮೀನಾಂಕಜನಕ** – ಮೀನನ್ನು ಧ್ವಜವಾಗಿ ಉಳ್ಳ ಮನ್ಮಥನ ತಂದೆ.

**Classification:** Keerthane
**Ankita:** purandara vittala
**Location:** NA
**Category:** Sankeerna, Vishnu Stuti, Rama Stuti
**Sub-Category:** arasa, Vishnu, Narayana, rama, hanuma, tande, tayi, bandhu, priti, preeti, keerthi, aprakruta, Vijaya, arjuna, ajamila, shankha, chakra, brahma,
**Pravachana:** NA
**Explanation:** NA